ಅಕ್ಟೋಬರ್–ಡಿಸೆಂಬರ್ –೨೦೨೦

ಸಂಪುಟ : 2 ಸಂಚಿಕೆ : 4

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

October-Deceber 2020

# KRUSHI VANA

*Quarterly news letter*



ಸಂಪಾದಕೀಯ....

# ಕೃಷಿ ಅರಣ್ಯದಲ್ಲಿ ವೈವಿಧ್ಯಮಯ ಮರಗಳು



ಕೃಷಿ ವನದ ಹಿಂದಿನ ಸಂಚಿಕೆಗಳಲ್ಲಿ ಕೃಷಿ ಅರಣ್ಯದ ಮಹತ್ವ ಮತ್ತು ಅದರಿಂದ ದೊರೆಯುವ ಲಾಭಗಳು ಅಂದರೆ ಅರಣ್ಯ ಸಂರಕ್ಷಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಕೃಷಿ ಭೂಮಿಯ ರಕ್ಷಣೆ ಮತ್ತು ಅಭಿವೃದ್ಧಿ ಹಾಗೂ ರೈತರಿಗುಂಟಾಗುವ ಹಣಕಾಸಿನ ಲಾಭಗಳ ಬಗ್ಗೆ ವರದಿಸಲಾಗಿತ್ತು. ಅಲ್ಲದೆ ಕೃಷಿ ಅರಣ್ಯದ ಅನೇಕ ಘಟಕಗಳಾದ ಮರದ ಉತ್ಪಾದನೆಗಾಗಿ ಮರಗಳನ್ನು ಬೆಳೆಯುವುದು, ಹಣ್ಣಿಗಾಗಿ, ಹಸಿರೆಲೆ ಗೊಬ್ಬರಕ್ಕಾಗಿ ಮತ್ತು ಹಿಪ್ಪು ನೇರಳೆ ಮರಗಳನ್ನು ಬೆಳೆಯುವುದನ್ನು ತಿಳಿಸಲಾಗಿತ್ತು. ಕೃಷಿ ಅರಣ್ಯದ ಗುರಿಯು ಮರಗಳ ಹೊದಿಕೆಯನ್ನು ಹೆಚ್ಚಿಸುವುದಷ್ಟೇ ಅಲ್ಲದೆ, ನೀರು ಮತ್ತು ಮಣ್ಣಿನ ಸಂರಕ್ಷಣೆ ಮತ್ತು ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇದ್ದರೂ ಸಹ, ಮುಖ್ಯವಾಗಿ ಒತ್ತನ್ನು ಜನರ ಅನೇಕ ಬೇಡಿಕೆಗಳಾದ ಮರಮುಟ್ಟು, ಉರುವಲು, ಹಣ್ಣು, ಮೇವು, ಹಸಿರೆಲೆ ಗೊಬ್ಬರ ಮತ್ತು ಇತರೆ ಉಪಯೋಗಗಳಿಗಾಗಿ ವಿವಿಧ ಜಾತಿಯ ಮರಗಳನ್ನು ಸಮತೋಲನದಲ್ಲಿ ಬೆಳೆಯುವುದಾಗಿದೆ. ಮರಮುಟ್ಟುಗಳಿಗಾಗಿ, ಹಣ್ಣಿಗಾಗಿ ಮತ್ತು ಶ್ರೀಗಂಧಕ್ಕಾಗಿ ಮರಗಳನ್ನು ಬೆಳೆಯುವುದಷ್ಟೇ ಅಲ್ಲದೆ, ಕೃಷಿ ಅರಣ್ಯವು ಎರಡು ಗುಂಪಿನ ಮರಗಳ ಬಗ್ಗೆ ಕೇಂದ್ರೀಕರಿಸಲಿದೆ. ಅಂದರೆ ಜನರ ಬದುಕಿನ ಮೇಲೆ ನೇರವಾಗಿ ಯಾವ ಪರಿಣಾಮವನ್ನು ಉಂಟು ಮಾಡುತ್ತದೆ ಎಂದು ಹಾಗೂ ಜನರ ಆಹಾರದ ಬೇಡಿಕೆಯನ್ನು ಯಾವ ರೀತಿ ಪೂರೈಸುವುದು ಎಂಬುದರ ಬಗ್ಗೆ ಒತ್ತನ್ನು ನೀಡುತ್ತದೆ.

ಹೊಂಗೆ, ಬೇವು, ಅಂಕೋಲೆ, ಶಿವನಿ, ಹಾಲೆ, ಭೂತಾಳೆ ಇತ್ಯಾದಿ ಮರಗಳ ಬೆಳವಣಿಗೆಯನ್ನು ಕೃಷಿ ಭೂಮಿಯ ಸುತ್ತಲೂ ಬೆಳಸಲು ಸೂಕ್ತವಾಗಿವೆ. ಹೊಂಗೆ ಮತ್ತು ಬೇವಿನ ಮರಗಳು ನಮಗೆಲ್ಲಾ ತಿಳಿದಿರುವಂತೆ ಒಳ್ಳೆಯ ಎಣ್ಣೆ ಬೀಜಗಳನ್ನು ನೀಡುವ ಮರಗಳಾಗಿವೆ. ಭೂತಾಳೆ, ಶಿವನಿ, ಹಾಲೆ ಮರಗಳು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಕುಮಟಾ, ಚನ್ನಪಟ್ಟಣ, ಕಿನ್ನಾಳ ಪ್ರದೇಶಗಳಲ್ಲಿ ಹೆಸರುವಾಸಿಯಾಗಿವೆ. ಅಂಕೋಲೆ ಮರವು ಸಣ್ಣದರಿಂದ ಮಧ್ಯಮ ಗಾತ್ರದ ಮರವಾಗಿದ್ದು, ಕೃಷಿ ಉಪಕರಣಗಳ ಮತ್ತು ಮನೆಗೆ ಬೇಕಾದ ವಸ್ತುಗಳ ಪೀಠೋಪಕರಣಗಳ ತಯಾರಿಕೆಗೆ ಉತ್ತಮ ಗುಣಮಟ್ಟದ ಮರವಾಗಿದೆ.

ಆದರ್ಶಪ್ರಾಯವಾದ ಮನೆಗೆ ಒಂದು ಕೈತೋಟವಿರಬೇಕು. ಪ್ರತಿ ಮನೆಯವರು ಅವರವರ ಕೈತೋಟದಲ್ಲಿ ಇಲ್ಲಿ ನೀಡಲಾಗಿರುವ ಯಾವುದಾದರೂ ಒಂದೊಂದು ಮರಗಳನ್ನು ಅಂದರೆ ನುಗ್ಗೆ, ಕರಿಬೇವು, ನಿಂಬೆ, ದಾಲ್ಚಿನ್ನಿ, ನೆಲ್ಲಿ, ಪೇರಳೆ/ಸೀಬೆ ಮತ್ತು ಸಾಧ್ಯವಿರುವೆಡೆ ಒಂದು ಸೀಮೆ/ಮಾರಿಹಾಳ ಬಿದಿರಿನ ಅಥವಾ ಮೇದರಿ ಬಿದಿರುಗಳನ್ನು ಬೆಳೆಯುವುದು ಸೂಕ್ತವಾಗಿದೆ. ಇಲ್ಲಿ ನಮೂದಿಸಿರುವ ಐದಾರು ಜಾತಿಯ ಮರಗಳನ್ನು ಪ್ರತಿ ಮನೆಯಂಗಳ ಅಥವಾ ಕೈತೋಟದಲ್ಲಿ ಬೆಳೆಸುವುದರಿಂದ ರಾಜ್ಯದ ಮರಗಳ ಹೊದಿಕೆಯನ್ನು ಹೆಚ್ಚಿಸುವಂತಹ ಮಹತ್ಕಾರ್ಯದಲ್ಲಿ ಭಾಗೀದಾರರಾಗಲು ಕೋರಿದೆ.

**– ಶ್ರೀ ದೀಪಕ್ ಶರ್ಮ**
**ಸಂಪಾದಕರು**

ಮಾಹಿತಿ

# ಕರ್ನಾಟಕ ಅರಣ್ಯ ಇಲಾಖೆಯ ಕೃಷಿ ಅರಣ್ಯ ಪ್ರೋತ್ಸಾಹ ಕಾರ್ಯಕ್ರಮದಡಿ ಪ್ರೋತ್ಸಾಹ ಧನ ಹೆಚ್ಚಳ

ಕರ್ನಾಟಕ ಸರ್ಕಾರವು ದಿ.27–12–2019ರ ಆದೇಶದಲ್ಲಿ ಈ ಹಿಂದೆ ಬದುಕುಳಿದ ಸಸಿ ಒಂದಕ್ಕೆ ಮೂರು ವರ್ಷಗಳಿಗೆ ರೂ.100/– ಪ್ರೋತ್ಸಾಹ ಧನ ನೀಡುತ್ತಿದ್ದುದನ್ನು ಈ ಕೆಳಗಿನಂತೆ ರೂ.125/–ಕ್ಕೆ ಹೆಚ್ಚಿಸಿ ಮರಗಿಡಗಳನ್ನು ಹೆಚ್ಚು ಹೆಚ್ಚು ಬೆಳೆಸಿ ರಕ್ಷಿಸಲು ಪ್ರೋತ್ಸಾಹ ನೀಡಿರುವುದು ಸ್ವಾಗತಾರ್ಹ.

1. **ಮೊದಲನೆ ವರ್ಷದ ಅಂತ್ಯಕ್ಕೆ ಪ್ರತಿ ಬದುಕುಳಿದ ಸಸಿಗೆ ಪ್ರೋತ್ಸಾಹ ಧನ ರೂ.35/–**
2. **ಎರಡನೇ ವರ್ಷದ ಅಂತ್ಯಕ್ಕೆ ಪ್ರತಿ ಬದುಕುಳಿದ ಸಸಿಗೆ ಪ್ರೋತ್ಸಾಹ ಧನ ರೂ.40/–**
3. **ಮೂರನೇ ವರ್ಷದ ಅಂತ್ಯಕ್ಕೆ ಪ್ರತಿ ಬದುಕುಳಿದ ಸಸಿಗೆ ಪ್ರೋತ್ಸಾಹ ಧನ ರೂ.50/–**

ರೈತರು ಅಥವಾ ಸಾರ್ವಜನಿಕರು ಅವರಿಗೆ ಬೇಕಾದ ಅರಣ್ಯ ಸಸಿಗಳನ್ನು ಹತ್ತಿರದ ಅರಣ್ಯ ಇಲಾಖೆ ನರ್ಸರಿಯಿಂದ ಅಥವಾ ಅರಣ್ಯ ಇಲಾಖೆ ಹೊರತುಪಡಿಸಿ ಯಾವುದೇ ಮೂಲಗಳಿಂದ ಸಸಿಗಳನ್ನು ಪಡೆದು ಅವರ ಸ್ವಂತ ಜಮೀನಿನಲ್ಲಿ ನಾಟಿ ಮಾಡಿ ಬೆಳೆಸಬಹುದು. ನಾಟಿ ಮಾಡಿದ ಆಯಾ ವರ್ಷದ ಅಗಸ್ಟ್ ಮಾಹೆಯ ಅಂತ್ಯದೊಳಗೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಅವರ ಹೆಸರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಬದುಕುಳಿದ ಸಸಿಗಳ ಮೌಲ್ಯಮಾಪನವನ್ನು ಅರಣ್ಯ ಇಲಾಖಾ ಅಧಿಕಾರಿಗಳು ಅಥವಾ ಸಿಬ್ಬಂದಿಯವರು ಪ್ರತಿ ವರ್ಷ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಕೈಗೊಳ್ಳುತ್ತಾರೆ.

ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಟ ಒಂದು ಅಥವಾ ಹೆಚ್ಚು ವಲಯ ಅರಣ್ಯಾಧಿಕಾರಿಗಳ ಕಛೇರಿಗಳಿರುತ್ತವೆ. ಪ್ರತಿ ತಾಲ್ಲೂಕಿನಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯಗಳು ಸೇರಿದಂತೆ ಕನಿಷ್ಟ ಎರಡು ಅಥವಾ ಹೆಚ್ಚು ಅರಣ್ಯ ನರ್ಸರಿಗಳಿಂದ ಸಸಿಗಳನ್ನು ಸಸಿ ಒಂದಕ್ಕೆ ರೂ.1/– ಅಥವಾ 3/– ರಂತೆ ರಿಯಾಯಿತಿ ದರದಲ್ಲಿ ಪಡೆದುಕೊಳ್ಳಬಹುದು. ಮರಗಿಡಗಳನ್ನು ಬೆಳೆಸಿ ಆದಾಯ ಹೆಚ್ಚಿಸಿಕೊಳ್ಳಲು ಹಾಗೂ ಪರಿಸರ ಸಂರಕ್ಷಣೆ ಮಾಡಲು ಈ ಸದಾವಕಾಶವನ್ನು ಬಳಸಿಕೊಳ್ಳಲು ಮನವಿ.

**–ಕಾರ್ಯದರ್ಶಿ**
ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ.

## ಸುಭಾಷಿತ

**"ಯಾವ ರಾಷ್ಟ್ರ ತನ್ನ ದೇಶದ ಮಣ್ಣನ್ನು ನಾಶ ಪಡಿಸುತ್ತದೆಯೋ, ಅದು ತನ್ನಷ್ಟಕ್ಕೆ ತಾನೇ ನಾಶ ಹೊಂದುವುದು"**

– ಫ್ರಾಂಕ್‌ಲಿನ್ ಡಿ ರೂಸವೆಲ್ಟ್

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume: 2 Issue: 4

ಸಂಪುಟ: ೨ ಸಂಚಿಕೆ: ೪

## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಶ್ರೀ ಎನ್. ಸಂಪಂಗಿ, ಭಾ.ಅ.ಸೇ(ನಿ)

**ಸಂಪಾದಕರು**

ಶ್ರೀ ದೀಪಕ್ ಶರ್ಮ, ಭಾ.ಅ.ಸೇ(ನಿ)

**ಸಹ ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್. ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ ಎಚ್.ಜಿ.

## ಕಚೇರಿ ವಿಳಾಸ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೊ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com

WWW.iaft.co.in

## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಈ ಸಂಚಿಕೆಯ ಒಳಪುಟದಲ್ಲಿರುವ ಅರ್ಜಿ ನಮೂನೆಯ ಪ್ರತಿಯಲ್ಲಿ ಮಾಹಿತಿ ನೀಡಿ ಸದಸ್ಯತ್ವ ಶುಲ್ಕವನ್ನು IAFTಗೆ ಪಾವತಿ ಮಾಡಿ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/ NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: SYNB0000424

**ಎ.ಎಂ. ಅಣ್ಣಯ್ಯ,**
ಕಾರ್ಯದರ್ಶಿ

## ಪರಿವಿಡಿ

| | ಲೇಖನ | ಪುಟ |
|---|---|---|
| 1 | ಕೃಷಿ ಅರಣ್ಯ ಮತ್ತು ತೋಟಗಾರಿಕೆ | 04 |
| 2 | ವ್ಯವಸಾಯದಲ್ಲಾದ ಬದಲಾವಣೆ; ಜೀವ ವೈವಿಧ್ಯತೆಯ ನಾಶ | 05 |
| 3 | ಕೃಷಿ ಅರಣ್ಯ ಮತ್ತು ರೇಷ್ಮೆ ಬೆಳೆ | 06 |
| 4 | ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಲ್ಲಿ ಹಸಿರೆಲೆ ಗೊಬ್ಬರ | 07 |

## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ. ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |

Publisher: IAFT, Editor (ಸಂಪಾದಕರು): Dipak Sarmah, IFS (R), KRUSHI VANA, Quarterly News Letter, October-December-2020
Printed By: S.K. Chandrashekar, Rathna, Offset Printers, #.120, 1st Main Road, Cavery Nadhi Road, Bridavana Nagar, Bangalore-560019
Volume: 2
Issue: 4

# ಕೃಷಿ ಅರಣ್ಯ ಮತ್ತು ತೋಟಗಾರಿಕೆ

**ಶ್ರೀ ದೀಪಕ್ ಶರ್ಮ**, ಭಾ.ಅ.ಸೇ.(ನಿವೃತ್ತ), ಮೊ: 9986232094, **ಶ್ರೀ ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ.(ನಿವೃತ್ತ), ಮೊ.: 9448126246



ಕೃಷಿ ಅರಣ್ಯದಲ್ಲಿ ವನ ತೋಟಗಾರಿಕೆಯು ಒಂದು ಪ್ರಮುಖ ಭಾಗವಾಗಿದೆ. ಇದುವರೆಗೂ ಅರಣ್ಯ ಮತ್ತು ಕೃಷಿ ಅಭಿವೃದ್ಧಿಯಲ್ಲಿ ಕೃಷಿ ಅರಣ್ಯ ಮಹತ್ವದ ಬಗ್ಗೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತು. ಮುಂಬರುವ ದಿನಗಳಲ್ಲಿ ಕೃಷಿ ಅರಣ್ಯದ ವನ ತೋಟಗಾರಿಕೆಯು ಪರಿಸರದ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಲಿದೆ. ಇತರೆ ರಾಜ್ಯಗಳೂ ಸೇರಿದಂತೆ, ಕರ್ನಾಟಕ ರಾಜ್ಯವು ಸಹ ಹವಾಮಾನ ಬದಲಾವಣೆಯಿಂದ ಉಂಟಾಗಿರುವ ಪ್ರಕೃತಿ ವಿಕೋಪ, ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ಎದುರಿಸುತ್ತಿದೆ. ಕೃಷಿ ಬೆಳೆಗೆ ಹೋಲಿಸಿದಾಗ, ಮರದ ಬೆಳೆಗಳು ಪರಿಣಾಮಕಾರಿಯಾಗಿ ಪರಿಸರದಲ್ಲಾಗುವ ವ್ಯತ್ಯಯಗಳನ್ನು ತಡೆದುಕೊಂಡು ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲಿವೆ. ಇಷ್ಟೇ ಅಲ್ಲದೆ ಮರದ ಬೆಳೆಗಳು ಮಣ್ಣಿನ ತೇವಾಂಶ ರಕ್ಷಣೆಯಲ್ಲಿ ಮತ್ತು ಮಣ್ಣಿನ ಜೀವ ರಾಸಾಯನ ಭೌತಿಕ ಗುಣಮಟ್ಟವನ್ನು ಹೆಚ್ಚಿಸಲಿವೆ. ಒಣ ಕೃಷಿ ಭೂಮಿಯಲ್ಲಿ ತೀವ್ರ ತರವಾದ ತೇವಾಂಶದ ಕೊರತೆಯಿದ್ದರೂ, ಕೃಷಿ ಅರಣ್ಯಗಳು ಬರೀ ಕೃಷಿ ಬೆಳೆಗಿಂತಲೂ ಉತ್ತಮವಾಗಿ ಸ್ಪಂದಿಸುವವು. ಕೃಷಿ ಅರಣ್ಯದ ಯಶಸ್ಸಿಗೆ ರೂಪಿಸುವ ಕಾರ್ಯಕ್ರಮದ ಸಂಪೂರ್ಣ ಯಶಸ್ಸಿಗೆ ದಾರಿದೀಪವಾಗುವುದು. ಕೃಷಿ ಅರಣ್ಯದಿಂದ ಉಂಟಾಗುವ ಪೂರ್ಣ ಲಾಭಗಳ ಬಗ್ಗೆ ರೈತರಿಗೆ ಸಂಪೂರ್ಣವಾಗಿ ಮನವರಿಕೆ ಮಾಡಬೇಕಿದೆ. ಅವರುಗಳಿಗೆ ಕೃಷಿ ಅರಣ್ಯದಿಂದ ಉಂಟಾಗುವ ಸಂಪೂರ್ಣ ಅನುಕೂಲಗಳ ನಿಟ್ಟಿನಲ್ಲಿ ಹಾಗೂ ಇದರಿಂದ ಸಮಾಜದ ಮೇಲೆ ಉಂಟಾಗುವ ಲಾಭದ ಬಗ್ಗೆ ಅರಿವು ಮೂಡಿಸಬೇಕಿದೆ. ರೈತರ ಆಯ್ಕೆಗೆ ತಕ್ಕಂತೆ ಅನೇಕ ಜಾತಿಯ ಮರಗಳ ಬಗ್ಗೆ ವಿವರಿಸಬೇಕಿದೆ. ಅವರುಗಳ ಬೇಕು ಬೇಡಗಳ ನಿಟ್ಟಿನಲ್ಲಿ ಜಾಗೃತಿ ಮೂಡಿಸಬೇಕಿದೆ. ಈ ಒಂದು ಸನ್ನಿವೇಶದಲ್ಲಿ ವನ ತೋಟಗಾರಿಕೆಯಲ್ಲಿ ಫಲ ನೀಡುವ ಮರಗಳ ಆಯ್ಕೆಯು ಬೇರೆ ಮರಗಳಿಗಿಂತ ಅನೇಕ ಕಾರಣಗಳಿಂದ ಅಂದರೆ ಸುಲಭವಾಗಿ ದೊರೆಯುವ ಮಾರುಕಟ್ಟೆ ಮತ್ತು ಸುಲಭವಾಗಿ ಮಾರಾಟವಾಗುವ ಮರಗಳ ಜಾತಿಗಳು ರೈತರನ್ನು ಹೆಚ್ಚಾಗಿ ಆಕರ್ಷಿಸಬಲ್ಲವು.

ಕೃಷಿ ಅರಣ್ಯದ ಬಹು ಮುಖ್ಯವಾದ ಗುರಿಯೆಂದರೆ ಸಾಕಷ್ಟು ಪ್ರಮಾಣದಲ್ಲಿ ಮರಗಳನ್ನು ಹೊಂದಿರುವುದಾಗಿದೆ. ಮರಗಳ ಹೊದಿಕೆ ಎಂದರೆ ಕೇವಲ ಅರಣ್ಯಗಳಲ್ಲಿ ಕಂಡುಬರುವ ಮರಗಳ ಜಾತಿಯಷ್ಟೆ ಅಲ್ಲದೆ, ಅರಣ್ಯ ಇಲಾಖೆಯು ಸಾಮಾನ್ಯವಾಗಿ ಅರಣ್ಯಗಳಲ್ಲಿ ಬೆಳೆಸುವ ಮರಗಳನ್ನು ಕೃಷಿ ಅರಣ್ಯದಲ್ಲಿ ಬೆಳೆಸುವುದು. ಇಲ್ಲಿ ಬಹಳ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಮರಗಳು ಬಹುವಾರ್ಷಿಕ ಬೆಳೆಯಾಗಿರಬೇಕು ಮತ್ತು ಗಟ್ಟಿಯಾದ ಕಾಂಡವನ್ನು ಹೊಂದಿರಬೇಕಷ್ಟೇ. ಎಲ್ಲಾ ಹಣ್ಣು ಬಿಡುವ ತೋಟಗಾರಿಕಾ ಮರಗಳು ಮೇಲಿನ ಅಂಶಗಳನ್ನು ಪೂರೈಸುತ್ತವೆ. ಅವುಗಳೆಂದರೆ ಕಾಫಿ, ತೆಂಗು, ಅಡಿಕೆ, ಕೋಕೋ, ಜಾಯಿಕಾಯಿ, ವಾಟೇ ಹುಳಿ, ಮಾವು, ಹಲಸು, ಹುಣಸೆ, ನೇರಳೆ, ನೆಲ್ಲಿ, ಗೋವಾ ಅಥವಾ ಪೇರಳೆ, ದಾಳಿಂಬೆ, ಲಿಂಬೆ, ಚಕೋತ, ಕಿತ್ತಳೆ, ನುಗ್ಗೆ, ಚಿಕ್ಕೂ ಅಥವಾ ಸಪೋಟಾ, ಸೀತಾಫಲ, ರಾಮಫಲ್, ಬೋರೆಹಣ್ಣು, ಅವಕ್ಯಾಡೋ, ನಕ್ಷತ್ರ ಹಣ್ಣು, ಗೋಡಂಬಿ, ಅಂಜೂರ, ಮುರುಗಲ್, ಕವಳೆಕಾಯಿ, ಬ್ರೆಡ್ ಫ್ರೂಟ್, ಬೇಲ, ಬಿಲ್ವ, ರೋಸ್–ಆಫಲ್, ಗೂಸ್ ಬೆರಿ ಮುಂತಾದವುಗಳು ತೋಟಗಾರಿಕಾ ಬೆಳೆಗಳಾಗಿವೆ. ರೈತರು ಈಗಾಗಲೇ ತಿಳಿಸಿರುವ ಜಾತಿಯ ಮರಗಳನ್ನು ಮಣ್ಣಿನ ಗುಣಧರ್ಮಕ್ಕೆ ಹಾಗೂ ವಿಸ್ತೀರ್ಣಕ್ಕೆ ಅನುಗುಣವಾಗಿ ಅವರ ಜಮೀನುಗಳಲ್ಲಿ ಬೆಳೆಯಬಹುದು. ಇವುಗಳಲ್ಲದೆ ರೈತರುಗಳು ಬೇರೆ ಮರದ ಜಾತಿಯ ಗಿಡಗಳನ್ನು ಅಂದರೆ ಹೆಬ್ಬೇವು, ಬೇವು, ಹೊಂಗೆ, ರಬ್ಬರ್, ಸಂಪಿಗೆ, ಹಿಪ್ಪೆ, ಕರಿಬೇವು ಮುಂತಾದವುಗಳನ್ನು ಸಹ ಬೆಳೆಯಬಹುದು. ಇವುಗಳು ರೈತರಿಗೆ ಹಣ್ಣು ಬಿಡುವ ಮರಗಳಂತೆ ಸ್ಥಿರವಾದ ಆದಾಯವನ್ನು ತರಬಲ್ಲವು. ಇಲ್ಲಿ ನಮೂದಿಸಿರುವ ಅನೇಕ ಜಾತಿಯ ಮರಗಳು ಒಣ ಭೂಮಿಯಲ್ಲಿ ಕೃಷಿ ಬೆಳೆಗಿಂತಲೂ ಹೆಚ್ಚಿನ ಆದಾಯ ತರುವುದಾಗಿದೆ.

ಖಾಸಗಿ ಜಮೀನಿನಲ್ಲಿ ಬೆಳೆಸಿರುವ ವನ ತೋಟಗಾರಿಕೆ ಮರದ ನೆಡುತೋಪುಗಳು ರಾಜ್ಯದ ಒಟ್ಟಾರೆ ಅರಣ್ಯ ಮತ್ತು ಮರದ ಹೊದಿಕೆ ಹೆಚ್ಚಿಸುವಲ್ಲಿ ಮಹತ್ವದ ಕೊಡುಗೆಯನ್ನು ನೀಡಿವೆ. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC), ಬೆಂಗಳೂರುರವರ 2006ರ ವರದಿಯಲ್ಲಿ ಸರಿ ಸುಮಾರು 9.20 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ನೆಡುತೋಪುಗಳನ್ನು ಖಾಸಗಿ ಜಮೀನುಗಳಲ್ಲಿ ತೋಟಗಾರಿಕಾ ಜಾತಿಯ ಮರಗಳೊಂದಿಗೆ ಬೆಳೆಸಿರುವುದಾಗಿ ವರದಿಸುತ್ತಾರೆ. ಅವುಗಳೆಂದರೆ ತೆಂಗು, ಕಾಫಿ, ಅಡಿಕೆ, ಚಹಾ, ರಬ್ಬರ್, ಗೋಡಂಬಿ ಮುಂತಾದ ಮರಗಳನ್ನು ಕೃಷಿ ಅರಣ್ಯಗಳಲ್ಲದೆ ಬೆಳೆಸಲಾಗಿದೆ. ಕೇಂದ್ರೀಯ ಕೃಷಿ ಅರಣ್ಯ ಸಂಶೋಧನಾ ಸಂಸ್ಥೆಯು (CAFRT) ದತ್ತಾಂಶ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ 9.30 ಲಕ್ಷ ಹೆಕ್ಟೇರ್ (2014) ವಿಸ್ತೀರ್ಣದಲ್ಲಿ ಕೃಷಿ ಅರಣ್ಯ ಬೆಳೆಸಿರುವುದಾಗಿ ತನ್ನ ದತ್ತಾಂಶ ವರದಿಯಲ್ಲಿ ವರದಿಸಿರುತ್ತಾರೆ. ಇದರಲ್ಲಿ ಬಹಳಷ್ಟು ಕೃಷಿ ಅರಣ್ಯದ ನೆಡುತೋಪುಗಳು ವಾಸ್ತವದಲ್ಲಿ ತೋಟಗಾರಿಕಾ ನೆಡುತೋಪುಗಳಾಗಿವೆ. ಅಂದಾಜಿನ ಪ್ರಕಾರ ಶೇ.25–30 ರಷ್ಟು ಕರ್ನಾಟಕ ರಾಜ್ಯದಲ್ಲಿಯ ಅರಣ್ಯ ಮತ್ತು ಮರಗಳ ಹೊದಿಕೆಯು ತೋಟಗಾರಿಕಾ ನೆಡುತೋಪುಗಳಿಂದ ಕೂಡಿದೆ.

ರಾಜ್ಯದ ಅರಣ್ಯ ಇಲಾಖೆ ಮತ್ತು ತೋಟಗಾರಿಕಾ ಇಲಾಖೆ ರಾಜ್ಯದಲ್ಲಿ ಅರಣ್ಯ ಮತ್ತು ಮರದ ಹೊದಿಕೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಕೊಡುಗೆಯನ್ನು ನೀಡಿರುವುದು ತಿಳಿದ ವಿಚಾರವಾಗಿದೆ. ಇಂತಹ ಅರಿವು ಮತ್ತಷ್ಟು ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಜಾಗೃತಿಗೊಳಿಸಿ, ತುಂಬು ಹೃದಯದಿಂದ ಮಹತ್ವದ ಕಾರ್ಯ ವನ ತೋಟಗಾರಿಕೆಯನ್ನು ರೈತರು ಅವರ ಜಮೀನುಗಳಲ್ಲಿ ಬೆಳೆಸುವಂತೆ ಅವರಿಗೆ ಬೇಕಾದ ಜಾತಿಯ ಅರಣ್ಯ ಮತ್ತು ತೋಟಗಾರಿಕೆ ಮರಗಿಡಗಳನ್ನು ಪೂರೈಸಿ ಪ್ರೋತ್ಸಾಹಿಸುವುದು ಅತ್ಯಾವಶ್ಯಕವಾಗಿದೆ. ರಾಜ್ಯದ ಒಣ ಭೂಮಿಯಲ್ಲಿ ತೋಟಗಾರಿಕೆಯನ್ನು ಕೈಗೊಳ್ಳಲು ಅತ್ಯುತ್ತಮ ಅವಕಾಶಗಳಿವೆ. ಅದರಲ್ಲೂ ವಿಶೇಷವಾಗಿ ಒಳನಾಡು ಕರ್ನಾಟಕ ಮತ್ತು ಪೂರ್ವ ಮೈದಾನ ಪ್ರದೇಶಗಳಲ್ಲಿ, ಒಣ ಮತ್ತು ಬಿಸಿಲಿನಿಂದ ನಲುಗಿರುವ ಭೂಮಿಯಲ್ಲಿ ಪೂರಕವಾದ ಹಣ್ಣು ನೀಡುವ ಮರಗಳನ್ನು ಬೆಳೆಯುವುದರಿಂದ ಕೃಷಿ ಬೆಳೆಗಳ ಜೊತೆಗೆ ಹೆಚ್ಚಿನ ಉತ್ಪತ್ತಿಯನ್ನು ಪಡೆಯಬಹುದು. ಈಗಾಗಲೇ ತಿಳಿಸಿರುವಂತೆ, ಇಂತಹ ನೆಡುತೋಪುಗಳು ರೈತರ ಆದಾಯ ಹೆಚ್ಚಿಸುವಲ್ಲಿ ಹಾಗೂ ಕೃಷಿ ಭೂಮಿಯ ಆರೋಗ್ಯವನ್ನು ವರ್ಧಿಸುವಲ್ಲಿ ಸಹಾಯಕವಾಗಿವೆ. ■

# ವ್ಯವಸಾಯದಲ್ಲಾದ ಬದಲಾವಣೆ; ಜೀವ ವೈವಿಧ್ಯತೆಯ ನಾಶ

✍ **ಶ್ರೀ ಸಂಜಯ್ ಹೊಯ್ಸಳ** ಮೊ: 9663250767

ಹಿಂದೆ ನಾವು ಚಿಕ್ಕವರಿದ್ದಾಗ ನಮ್ಮೂರ ಹೊಲ ಗದ್ದೆಗಳಲ್ಲಿ ವಿವಿಧ ಬಗೆಯ ಬೆಳೆಗಳನ್ನು ಬೆಳೆಯುತ್ತಿದ್ದರು. ಹೊಲದಲ್ಲಿ ಎಳ್ಳು, ಹುಚ್ಚೆಳ್ಳು, ಸೂರ್ಯಕಾಂತಿ, ರಾಗಿ, ನೆಲಗಡಲೆ, ಜೋಳ, ಕಲ್ಲಂಗಡಿ, ಹುರುಳಿ, ಉದ್ದು, ಹೆಸರು, ತಗಣಿಕಾಳು (ಅಲಸಂದೆ), ಸೆಣಬು, ತೊಗರಿ, ಒಂದಾ ಎರಡಾ? ಇನ್ನು ಗದ್ದೆಯಲ್ಲಿ (ನೀರಾವರಿ ಜಮೀನು) ಭತ್ತ, ಕಬ್ಬು ಎರಡು ಪ್ರಮುಖ ಬೆಳೆಗಳು. ಹೀಗೆ ವಿವಿಧ ಬೆಳೆ ಬೆಳೆಯುವುದರ ಜೊತೆಗೆ ಆಗ ಮನೆಯಲ್ಲಿ ಸಾಕಿದ್ದ ಹಸು-ಕರುಗಳು, ಆಡು-ಕುರಿಗಳನ್ನು ಮೇಯಿಸಲು ಅನುವಾಗುವಂತೆ ಒಟ್ಟಾರೆ ತಮಗಿದ್ದ ಜಮೀನಿನಲ್ಲಿ ಒಂದಿಷ್ಟು ಭಾಗವನ್ನು ಬದುಗಳಾಗಿ (ಹುಲ್ಲುಗಾವಲು) ಬಿಟ್ಟಿರುತ್ತಿದ್ದರು. ಅಲ್ಲಿ ವಿವಿಧ ಜಾತಿಯ ಹುಲ್ಲು ಸೇರಿದಂತೆ ಕಾರೆ, ಕೀರೆ, ತುಂಬೆ, ಉತ್ರಾಣಿ ಸೇರಿ ಹಲವು ಗಿಡಗಂಟಿ, ಪೊದೆಯ (Shrubs) ಜಾತಿಯ ಗಿಡಗಳು ಬೆಳೆಯುತ್ತಿದ್ದವು. ಇವೆಲ್ಲವೂ ಜೀವ ವೈವಿಧ್ಯತೆಯ ಪೋಷಕ ಅಂಶಗಳಾಗಿದ್ದವು. ಹೀಗಾಗಿ ಹೊಲಗದ್ದೆಗಳಲ್ಲಿ ಕಾಡು ಹಂದಿಗಳು, ನರಿಗಳು, ತೋಳಗಳು, ಮೊಲ, ಮುಂಗುಸಿ ಸೇರಿ ಬಗೆಬಗೆಯ ಪಕ್ಷಿಗಳು ಸಾಕಷ್ಟು ಸಂಖ್ಯೆಯಲ್ಲಿ ಓಡಾಡುತ್ತಿದ್ದವು. ರಾತ್ರಿ 9–10 ಗಂಟೆಗೆಲ್ಲ ನರಿಗಳು ಕೂಗುವುದು, ಗೂಳಿಡುವುದನ್ನು ಕೇಳಿದರೆ ಏನೋ ರೋಮಾಂಚನ. ಬೆಳಗ್ಗೆ, ಸಂಜೆ ನವಿಲುಗಳ ನಿನಾದ ಕೇಳಲು ಏನೋ ಉಲ್ಲಾಸ. ಹೆಜ್ಜೇನುಗಳು ರಾಶಿರಾಶಿ ಸಂಖ್ಯೆಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವಾಗ ಭಯ ಮಿಶ್ರಿತ ಸಂತೋಷ.

ನಮ್ಮೂರ ಹೊಲಗದ್ದೆಗಳಲ್ಲಿ ಬೆಳೆಯುತ್ತಿದ್ದ ಎಳ್ಳು, ಹುಚ್ಚೆಳ್ಳು, ಸೂರ್ಯಕಾಂತಿಯಂತಹ ಹೂವಿನ ಜಾತಿಯ ಬೆಳೆಗಳು ಜೇನಿನಂತಹ ಜೀವಿಗಳಿಗೆ ಮಕರಂದ ಒದಗಿಸಿ ಅವುಗಳ ಉಳಿವಿಗೆ ಕಾರಣವಾಗಿದ್ದರೆ, ನೆಲಗಡಲೆ, ಜೋಳ, ಕಲ್ಲಂಗಡಿ ಹಣ್ಣಿನಂತಹ ಬೆಳೆಗಳು ಕಾಡಂದಿ, ನರಿಗಳಂತಹ ಪ್ರಾಣಿಗಳಿಗೆ ಆಹಾರ ಒದಗಿಸುತ್ತಿದ್ದವು (ನರಿಗಳು ಮತ್ತು ಕಲ್ಲಂಗಡಿ ಹಣ್ಣಿನ ಒಂದು ಪ್ರಮುಖ ಜಾನಪದ ಕತೆ ಕೇಳಿರಬಹುದು). ಇನ್ನು ಆ ಕಾಲದಲ್ಲಿ ಜನರು ಯತೇಚ್ಛವಾಗಿ ಸಾಕುತ್ತಿದ್ದ ಕುರಿ–ಕೋಳಿಗಳಿಂದ, ಗದ್ದೆಯಲ್ಲಿನ ಏಡಿ, ಮೀನುಗಳು, ತೋಳ, ನರಿಗಳಿಗೆ ಪ್ರಮುಖ ಆಹಾರ ದೊರೆತು ಅವುಗಳು ಆರಾಮವಾಗಿದ್ದವು. ಹೊಲದಲ್ಲಿನ ಗರಿಕೆ, ರಾಗಿ ಸಾಕಷ್ಟು ಸಂಖ್ಯೆಯಲ್ಲಿದ್ದ ಮೊಲಗಳಿಗೆ ಆಹಾರವಾಗಿದ್ದವು. ಇನ್ನು ಹೊಲಗದ್ದೆಗಳಲ್ಲಿ ಮುಂಗುಸಿ, ಕಾಡಬೆಕ್ಕು, ವಿವಿಧ ಬಗೆಯ ಪಕ್ಷಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದವು. ಇವು ಒಂದಕ್ಕೊಂದು ಆಹಾರವಾಗಿ ಜೀವ ವೈವಿಧ್ಯತೆಯು ಇಲ್ಲಿ ತುಂಬಾ ಶ್ರೀಮಂತವಾಗಿತ್ತು.

ಬರಬರುತ್ತಾ ಹೊಲ–ಗದ್ದೆಗಳ ವ್ಯವಸಾಯ ವ್ಯವಸ್ಥೆಯಲ್ಲಿ ಗಣನೀಯವಾದ ಬದಲಾವಣೆಯಾದವು. ಎಳ್ಳು, ಹುಚ್ಚೆಳ್ಳುಗಳು ಕಣ್ಮರೆಯಾದವು. ಬಗೆಬಗೆಯ ಧಾನ್ಯಗಳು ಹೋದವು. ಎಲ್ಲೆಡೆ ಬರೇ ಹೊಗೆಸೊಪ್ಪು, ಕಲ್ಲಂಗಡಿ, ಇಲ್ಲವೇ ಮೆಕ್ಕೆಜೋಳದಂತಹ ಏಕ ರೀತಿಯ (Monopoly) ವಾಣಿಜ್ಯ ಬೆಳೆಗಳು ಬಂದವು. ಇದರ ಜೊತೆಗೆ ಸಾಕಷ್ಟು ಪ್ರಮಾಣದಲ್ಲಿ ಬದುಗಳನ್ನು (ಹುಲ್ಲುಗಾವಲು) ಉತ್ತು, ಹೊಲಗಳಾಗಿ ಪರಿವರ್ತಿಸಲಾಯಿತು. ವಿಶಾಲ ಹುಲ್ಲುಗಾವಲಿನಲ್ಲಿ ಮೇಯಿಸುತ್ತಿದ್ದ ದನ, ಕುರಿ, ಕೋಳಿಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಸಾಕಲಾರಂಭಿಸಲಾಯಿತು. ಕ್ರಿಮಿನಾಶಕಗಳ ಬಳಕೆ ವಿಪರೀತ ಎನ್ನುವಷ್ಟು ಹೆಚ್ಚಿತ್ತು.

ಈ ಬದಲಾವಣೆಯು ಒಂದೊಂದೇ ಅಂಶಗಳನ್ನು ಕ್ರಮೇಣವಾಗಿ ಒಂದೊಂದೇ ಜೀವಿಗಳ ಅಳಿವಿಗೆ ಕಾರಣವಾಯಿತು. ಎಳ್ಳು ಹುಚ್ಚೆಳ್ಳಿನಂತಹ ಬೆಳೆಗಳು ಕಡಿಮೆಯಾಗಲಾಗಿ, ಕ್ರಿಮಿನಾಶಕಗಳ ಬಳಕೆ ಹೆಚ್ಚಾಗಲಾಗಿ ಜೇನುಗಳ ಸಂತತಿ ಗಣನೀಯವಾಗಿ ಕಡಿಮೆಯಾಯಿತು. ಇನ್ನು ಆಡು, ಕುರಿ, ಕೋಳಿಗಳನ್ನು ಬಯಲಿನಲ್ಲಿ ಬಿಟ್ಟು ಮೇಯಿಸುವ ಪದ್ಧತಿ ಕಡಿಮೆಯಾದಂತೆ, ಕಬ್ಬಿನಂತಹ ಉತ್ತಮ ಆಸರೆ ಒದಗಿಸುತ್ತಿದ್ದ ಬೆಳಗಳ ಸಂಖ್ಯೆ ಕಡಿಮೆಯಾದಂತೆ, ಬದುಗಳಲ್ಲಿ ಗಿಡಗಂಟಿ, ಪೊದೆಗಳ ಸಂಖ್ಯೆ ಕಡಿಮೆಯಾದಂತೆ ನರಿ, ತೋಳದಂತಹ ಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಾ ಸಾಗಿತು. ಹಾಗೆಯೇ ರಾಗಿ, ಜೋಳದಂತಹ ಬೆಳೆಗಳು ಕಡಿಮೆಯಾದಂತೆ ಕಾಡು ಮೊಲಗಳು ಕಡಿಮೆಯಾಗುತ್ತಾ ಸಾಗಿದವು. ಇದರ ಜೊತೆಗೆ ಈ ಪ್ರಾಣಿಗಳ ಬೇಟೆ ಎಗ್ಗಿಲ್ಲದೆ ಸಾಗಿದ್ದು, ಈ ವಿಪರೀತ ರಾಸಾಯನಿಕ ಬಳಕೆಯಿಂದಲೋ ಏನೋ ಬಸವನಪಾದ, ಕಪ್ಪರಜೋಳ, ಸುಂಕದಹುಳ, ಓತಿಕ್ಯಾತ, ಹಾವರಾಣಿಯಂತಹ ಹಲವು ಚಿಕ್ಕ ಚಿಕ್ಕ ಜೀವಿಗಳು ಸಹ ಸಾಕಷ್ಟು ಪ್ರಮಾಣದಲ್ಲಿ ಇಲ್ಲವಾದವು.

ಜೀವ ವೈವಿಧ್ಯತೆಯಲ್ಲಿ ಪ್ರಮುಖ ಪಾತ್ರ ವಹಿಸುವ ನರಿ, ತೋಳ, ಮುಂಗುಸಿ ಸೇರಿ ಹಲವು ಜೀವಿಗಳಿಗೆ ಅರಣ್ಯ ಪ್ರದೇಶಕ್ಕಿಂತ ಜನವಸತಿಯ ಹೊಲಗದ್ದೆಗಳೇ ಉತ್ತಮ ಆವಾಸ ಸ್ಥಾನ. ಜನವಸತಿ ಪ್ರದೇಶದಲ್ಲಿ ಅವುಗಳ ಆಹಾರ ವ್ಯವಸ್ಥೆ, ಆವಾಸ ಸ್ಥಾನ ರಕ್ಷಿಸದೇ ಇಂತಹ ಜೀವಿಗಳ ರಕ್ಷಣೆ ಅಸಾಧ್ಯ. ಇವುಗಳು ಅರಣ್ಯಕ್ಕಿಂತ ಜನವಸತಿ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುವುದರಿಂದ ಇವುಗಳ ರಕ್ಷಣೆಯಲ್ಲಿ ಜನಸಾಮಾನ್ಯರ ಪಾತ್ರ ಅತಿ ಪ್ರಮುಖವಾದದ್ದು. ಎಲ್ಲಾ ಕ್ಷೇತ್ರಗಳಲ್ಲೂ ಅದರಂತೆಯೇ ಕೃಷಿ ಕ್ಷೇತ್ರದಲ್ಲೂ ಕೂಡ ಬದಲಾವಣೆ ಆಗುವುದು ಸಹಜ. ಆದರೆ ಈ ಬದಲಾವಣೆ ಅಲ್ಲಿನ ಪರಿಸರದಲ್ಲಿ ಹಿಂದಿನಿಂದಲೂ ವಾಸಿಸಿಕೊಂಡು ಬಂದಿರುವಂತಹ ಜೀವಿಗಳ ನಾಶಕ್ಕೆ ಕಾರಣವಾದರೆ ಅದನ್ನು ತಪ್ಪಿಸಲು ಜನಸಾಮಾನ್ಯರಾಗಿ ನಾವು ಏನು ಮಾಡಬಹುದು. ಏನು ಬದಲಾವಣೆ ಮಾಡಿಕೊಳ್ಳಬಹುದು ಎಂಬುದನ್ನು ವಿಚಾರಿಸಿ ಆ ನಿಟ್ಟಿನಲ್ಲಿ ಹೆಜ್ಜೆ ಹಾಕಿ ಜೀವ ವೈವಿಧ್ಯತೆಯ ರಕ್ಷಣೆಗೆ ಮುಂದಾಗಬೇಕಿದೆ. ಆ ಮೂಲಕ ನಮ್ಮ ಪರಿಸರ ವ್ಯವಸ್ಥೆ ಸಮತೋಲನದಲ್ಲಿರುವಂತೆ ನೋಡಿಕೊಳ್ಳುವ ಜರೂರಿದೆ. ■



# ಕೃಷಿ ಅರಣ್ಯ ಮತ್ತು ರೇಷ್ಮೆ ಬೆಳೆ

**ಶ್ರೀ ದೀಪಕ್ ಶರ್ಮ**, ಭಾ.ಅ.ಸೇ.(ನಿವೃತ್ತ), ಮೊ: 9986232094., **ಶ್ರೀ ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ.(ನಿವೃತ್ತ), ಮೊ.: 9448126246

ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಯುವುದು ಒಂದು ಪ್ರಮುಖ ಕೃಷಿ ಆಧಾರಿತ ಚಟುವಟಿಕೆ ಹಾಗೂ ಇದೊಂದು ಬಹು ಮುಖ್ಯವಾದ ಕೈಗಾರಿಕೆಯೂ ಆಗಿದೆ. ಹಿಪ್ಪು ನೇರಳೆ (Muberry) (Morus alba) ಗಿಡಗಳನ್ನು ರೈತರ ಜಮೀನುಗಳಲ್ಲಿ ಅಪಾರ ಪ್ರಮಾಣದಲ್ಲಿ ಬೆಳೆಯಲಾಗುವುದು. ಇಪ್ಪು ನೇರಳೆ ಎಲೆಗಳನ್ನು ರೇಷ್ಮೆ ಹುಳುಗಳಿಗೆ ಆಹಾರವಾಗಿ ಬಳಸಲಾಗುವುದು. ಇಪ್ಪು ನೇರಳೆ ಗಿಡವು ನೀರಾವರಿಗೆ ಮತ್ತು ರಾಸಾಯನಿಕ ಗೊಬ್ಬರಕ್ಕೆ ಅತ್ಯುತ್ತಮವಾಗಿ ಸ್ಪಂದಿಸುವುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯ ಕೊರತೆಯಿಂದ ಮತ್ತು ಅಂತರ್ಜಲ ಮಟ್ಟದಲ್ಲಿ ಕುಸಿತ ಉಂಟಾಗಿರುವುದರಿಂದ ಇಪ್ಪು ನೇರಳೆ ಎಲೆಗಳ ಉತ್ಪಾದನೆ ಹಾಗೂ ಗುಣಮಟ್ಟದ ಎಲೆಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಬಹಳಷ್ಟು ರೇಷ್ಮೆ ಬೆಳೆಗಾರರು ಬೆಳೆಯುವ ಇಪ್ಪು ನೇರಳೆ ತೋಟಗಳನ್ನು ಅವರ ಜಮೀನಿನಲ್ಲಿ ಲಭ್ಯವಿರುವ ನೀರಿಗೆ ಅನುಗುಣವಾಗಿ ವಿಸ್ತೀರ್ಣವನ್ನು ಕಡಿಮೆಗೊಳಿಸಿರುತ್ತಾರೆ. ಈ ಸಮಸ್ಯೆಗಳನ್ನು ನಿವಾರಿಸಲು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ರೈತರುಗಳು ಹೊಸ ಆವಿಷ್ಕಾರದ ಪದ್ಧತಿಯಿಂದಾಗಿ ಇಪ್ಪು ನೇರಳೆಯನ್ನು ಸಣ್ಣ ಮರವಾಗಿ ಬೆಳೆಸಲು ಪ್ರಾರಂಭಿಸಿದ್ದಾರೆ. ಈ ಪದ್ಧತಿಯಲ್ಲಿ 8'X8' ಅಡಿ ಅಥವಾ 10'X10' ಅಡಿ ಅಂತರದಲ್ಲಿ ಇಪ್ಪು ನೇರಳೆ ಗಿಡಗಳನ್ನು ನಾಟಿ ಮಾಡಿ, 4' ರಿಂದ 5' ಅಡಿ ಎತ್ತರದವರೆಗೆ ನೀರಾವರಿ ಹಾಗೂ ಮಳೆಯಾಶ್ರಿದಲ್ಲಿ ಬೆಳೆದು ನಿರ್ವಹಿಸುತ್ತಿದ್ದಾರೆ. ಈ ಪದ್ಧತಿಯಿಂದಾಗಿ ಯಂತ್ರಗಳನ್ನು ಬಳಸಲು ಮತ್ತು ಹನಿ ನೀರಾವರಿ ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ಇದರಿಂದ ಬೆಳೆಯಲು ತಗಲುವ ಖರ್ಚನ್ನು ಗುಣಮಟ್ಟದ ಎಲೆಗಳ ಉತ್ಪಾದನೆಯಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಮಾಡಿಕೊಳ್ಳದೆ ಬೆಳೆಯಲಾಗುವುದು. ಇದೊಂದು ನಿರ್ವಿವಾದವಾದ ಪದ್ಧತಿಯಾಗಿದ್ದು, ಇಪ್ಪು ನೇರಳೆ ಮರಗಳಿಂದ ಉತ್ಪಾದಿಸಲಾಗುವ ಎಲೆಗಳ ಗುಣಮಟ್ಟವು ಈ ಹಿಂದೆ ಬೆಳೆಯಲಾಗುತ್ತಿದ್ದ ತೋಟಗಳಿಗಿಂತಲೂ ಅತ್ಯುತ್ತಮವಾಗಿದೆ.

**ಇಪ್ಪು ನೇರಳೆ ಮರಗಳಿಂದಾಗುವ ಲಾಭಗಳು**

- ಮರಗಳನ್ನು ಮಳೆಯಾಶ್ರಿತದಲ್ಲಿ ಹಾಗೂ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದು.
- ಅತ್ಯುತ್ತಮವಾದ ಗುಣಮಟ್ಟದ ಎಲೆಗಳನ್ನು ಇಳುವರಿಯಲ್ಲಿ ಕಡಿಮೆಯಿಲ್ಲದಂತೆ ಬೆಳೆಯಬಹುದು.
- ಯಾಂತ್ರೀಕರಣವನ್ನು ಸುಲಭವಾಗಿ ಅಳವಡಿಸಿಕೊಳ್ಳಬಹುದು.
- ದ್ವಿದಳ ದಾನ್ಯಗಳು/ಕಾಳುಗಳು, ಆರ್ಥಿಕವಾಗಿ ಲಾಭ ತರುವ ಬೆಳೆಗಳು, ಹಸಿರು ಗೊಬ್ಬರ ನೀಡುವ ಬೆಳೆಗಳನ್ನು ಹೆಚ್ಚುವರಿ ಆದಾಯ ಪಡೆಯಲು ಬೆಳೆಯಬಹುದು ಮತ್ತು ಅವುಗಳಿಂದ ಉಳಿಯುವ ಭಾಗವನ್ನು ಗೊಬ್ಬರವಾಗಿ ಅಥವಾ ಮಣ್ಣಿನ ಮೇಲೆ ತೇವಾಂಶ ರಕ್ಷಣೆಗಾಗಿ ಮುಚ್ಚಬಹುದು.
- ಎರಡು ಲೈನ್‌ಗಳ ಮಧ್ಯದಲ್ಲಿ ಇಂಗು ಗುಂಡಿಗಳನ್ನು ಪರಿಣಾಮಕಾರಿಯಾಗಿ ಮಳೆಯ ನೀರನ್ನು ಭೂಮಿಯಲ್ಲಿ ಇಂಗಿಸಲು ಹಾಗೂ ಸಾವಯವ ಗೊಬ್ಬರ ತಯಾರಿಕೆಯ ಗುಂಡಿಯಾಗಿ ಉಪಯೋಗಿಸುವುದರಿಂದ ಸಾವಯವ ಅಂಶಗಳ ಪುನರ್‌ಬಳಕೆ ಮಾಡಬಹುದು.
- ಮೂರು ವರ್ಷಗಳ 8' ಅಡಿ x 8' ಅಡಿ ಅಂತರದಲ್ಲಿ ಬೆಳೆದ ತೋಟಗಳಿಂದ ಅಂದಾಜು 25 ಮೆಟ್ರಿಕ್‌ಟನ್ ಎಲೆಗಳನ್ನು ಪ್ರತಿ ಎಕರೆಯಿಂದ ಪ್ರತಿ ವರ್ಷಕ್ಕೆ ಉತ್ಪಾದಿಸಬಹುದು. ಸರಾಸರಿ 1500 ಲೇಯಿಂಗ್ಸ್‌ಗಳನ್ನು ರೇಷ್ಮೆ (ಹುಳುಗಳನ್ನು) ಪ್ರತಿ ಎಕರೆಗೆ ಬೆಳೆಯಬಹುದು ಹಾಗೂ 1000 ಕೆ.ಜಿ. ರೇಷ್ಮೆ (ಗೂಡುಗಳನ್ನು) ಉತ್ಪಾದಿಸಬಹುದು.

ಹಿಪ್ಪು ನೇರಳೆಯು ಬಹುವಾರ್ಷಿಕ ಬೆಳೆಯಾಗಿದ್ದು, ಕಾಂಡವನ್ನು ಹೊಂದಿರುವುದರಿಂದ ವಿವಿಧ ಕೃಷಿ ವಲಯಗಳಲ್ಲಿ ಬೆಳೆಯಬಹುದು. ಒಂದು ಬಾರಿ ಹೊಲಗಳಲ್ಲಿ ಬೆಳೆಯು ಸ್ಥಿರವಾದಲ್ಲಿ, ಗಿಡಗಳಿಂದ ಸತತವಾಗಿ ಉತ್ತಮ ಗುಣಮಟ್ಟದ ಎಲೆಗಳನ್ನು 20–25 ವರ್ಷಗಳವರೆಗೆ ಪೊದೆಗಳ ಮಾದರಿ ಪದ್ಧತಿ (Brush cultivation) ಹಾಗೂ 100 ವರ್ಷಗಳಿಗೂ ಮೇಲ್ಪಟ್ಟು ಮರದ ಬೆಳೆಯಾಗಿ ಬೆಳೆಯಬಹುದು. ಹಿಪ್ಪು ನೇರಳೆಯು ದೊಡ್ಡ ಗಾತ್ರದ ಮರವಾಗಿ ಬೆಳೆಯುವುದು. ಆದರೆ ಇದನ್ನು ಬ್ರಶ್ (ಪೊದೆ) ಮಾದರಿಯಲ್ಲಿ ಅಥವಾ ಸಣ್ಣ ಮರವಾಗಿ ಆಗಿಂದಾಗ್ಗೆ ರೆಂಬೆ ಕೊಂಬೆಗಳನ್ನು ಕತ್ತರಿಸಿ ಆರ್ಥಿಕ ಬಳಕೆಗೆ ಉಪಯೋಗಿಸಬಹುದು. ಆದರೆ ಇದು 20 ರಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಮತ್ತು ಬಿಸಿಲಿನ ಬೆಳಕು 9ರಿಂದ 13 ಗಂಟೆಗಳು ಪ್ರತಿ ದಿನಕ್ಕೆ ದೊರೆಯುವಂತ ಪ್ರದೇಶಗಳು ಬಹಳ ಸೂಕ್ತವಾದವುಗಳು. ಸರಾಸರಿ 50 ರಿಂದ 60 ಮಿ.ಮೀ ನೀರು ವಾರಕ್ಕೆ ಇಪ್ಪು ನೇರಳೆಗೆ ಬೇಕಾಗುವುದು. ಇಂತಹ ಸನ್ನಿವೇಶಗಳು ಭಾರತದ ದಕ್ಷಿಣದ ಉಷ್ಣ ವಲಯಗಳಲ್ಲಿ 5 ರಿಂದ 6 ಬಾರಿ ರೇಷ್ಮೆ ಹುಳುಗಳನ್ನು ಪ್ರತಿ ವರ್ಷದಲ್ಲಿ ಬೆಳೆಯಬಹುದು ಮತ್ತು ರೈತರು ಸುಮಾರು ರೂ.1.5 ರಿಂದ 2.0 ಲಕ್ಷ ಆದಾಯವನ್ನು ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ಇಪ್ಪು ನೇರಳೆ ಮರಗಳನ್ನು 10 ಅಡಿ x 10 ಅಡಿ ಅಂತರದಲ್ಲಿ ಇತರೆ ಕೃಷಿ ಬೆಳೆಗಳೊಂದಿಗೆ ಬೆಳೆಯುವುದರಿಂದ ಸಾಧ್ಯವಾಗುವುದು. ಇಪ್ಪು ನೇರಳೆ ಮರಗಳನ್ನು ಕೃಷಿ ಬೆಳೆಯೊಂದಿಗೆ ನೀರಾವರಿ ಪದ್ಧತಿಯಲ್ಲಿ ಎಲ್ಲಾ ಕೃಷಿ ವಲಯಗಳಲ್ಲಿ ಬೆಳೆಯುವುದು ಸೂಕ್ತವಾಗಿದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕದ ಒಣ ಉಷ್ಣ ವಲಯ ಪ್ರದೇಶಗಳಲ್ಲಿ ಬೆಳೆಯುವುದರಿಂದ ವರ್ಷ ಪೂರ್ತಿ ಆದಾಯ ಉತ್ಪತ್ತಿ ಮಾಡಲು ಸಹಾಯಕವಾಗಿದೆ.

ಇಪ್ಪು ನೇರಳೆ ಮರವನ್ನು ಸಾಂಪ್ರದಾಯಿಕವಾಗಿ ಎಲೆಗಳನ್ನು ರೇಷ್ಮೆ ಹುಳುಗಳನ್ನು ಸಾಕಲು ಬಳಸಲಾದರೂ, ಇದರ ಹಣ್ಣುಗಳು ಮತ್ತು ಮರಮುಟ್ಟುಗಳು ಸಹ ಬಹಳ ಉಪಯುಕ್ತವಾದವು. ಇಪ್ಪು ನೇರಳೆ ಹಣ್ಣುಗಳು ಸಿಹಿಯಾಗಿದ್ದು, ತಿನ್ನಲು ಉಪಯೋಗಿಸುವರು. ಸಾಮಾನ್ಯವಾಗಿ ಹಣ್ಣುಗಳು ಕೆಂಪು ಬಣ್ಣದಿಂದ ಕೂಡಿದ್ದರೂ, ಕೆಲವೊಮ್ಮೆ ಬಿಳಿ ಅಥವಾ ಕಪ್ಪು ಬಣ್ಣದಿಂದ ಸಹ ಕೂಡಿರುವವು ಮತ್ತು



ಪೋಷಕಾಂಶಯುಕ್ತವಾದವು. ಈ ಹಣ್ಣುಗಳನ್ನು ಜಾಮ್, ಜ್ಯೂಸ್, ವೈನ್ ಇತ್ಯಾದಿಗಳಾಗಿ ಸಹ ಪರಿವರ್ತಿಸಲಾಗುವುದು. ಹಣ್ಣುಗಳನ್ನು ಕೆಲವೊಮ್ಮೆ ಒಣಗಿಸಿ, ಒಣ ದ್ರಾಕ್ಷಿಯಂತೆ ಬಳಸಲಾಗುವುದು. ಇಪ್ಪು ನೇರಳೆ ಮರವು ನೇರವಾದ ಕಣಗಳಿಂದ ಕೂಡಿರುವುದು ಮತ್ತು ಮಧ್ಯಮ ರಚನೆಯಿಂದ ಸ್ವಾಭಾವಿಕ ಹೊಳಪನ್ನು ಹೊಂದಿರುವುದು. ಮಧ್ಯದ ಮರ (Heart wood) ಚೇಗವಿರುವ ಮರದ ಬಣ್ಣವು ಕಂದು ಬಣ್ಣದ್ದಾಗಿದ್ದು, ವರ್ಷಗಳು ಕಳೆದಂತೆ ಮಧ್ಯಮ ಕಪ್ಪು ಬಣ್ಣದಿಂದ ಕೆಂಪು ಮಿಶ್ರಿತ ಕಂದು ಬಣ್ಣಕ್ಕೆ ತಿರುಗುವುದು. ಹೊರಗಿನ ಮರವು ತಿಳಿ ಹಳದಿ ಮಿಶ್ರಿತ ಬಿಳಿ ಬಣ್ಣದಿಂದ ಕೂಡಿರುವುದು. ಮರವು ಬಾಳಿಕೆ ಬರುವುದು ಹಾಗೂ ಗಟ್ಟಿಯಾಗಿದ್ದು ಕೈಗಳಿಂದ ಉಪಯೋಗಿಸುವ ಉಪಕರಣಗಳು ಮತ್ತು ಯಂತ್ರಗಳಿಂದ ಉಪಯೋಗಿಸುವ ಉಪಕರಣಗಳಿಗೆ ಮತ್ತು ಅಂಟಿಗೆ ಉತ್ತಮವಾಗಿ ಸ್ಪಂದಿಸುವುದು ಹಾಗೂ ಉತ್ತಮವಾಗಿ ಪೂರ್ಣಗೊಳಿಸಬಹುದು. ಈ ಮರವು ಪೀಠೋಪಕರಣಗಳ ಮತ್ತು ಕಡಿತದ ಕೆಲಸಕ್ಕೆ ಸೂಕ್ತವಾಗಿದೆ. ಇಪ್ಪು ನೇರಳೆ ಮರದಿಂದ ಮತ್ತು ಹಾಲೆ ಮರಗಳಿಂದ ಚನ್ನಪಟ್ಟಣದಲ್ಲಿ (ರಾಮನಗರ ಜಿಲ್ಲೆ) ತಯಾರಿಸುವ ಆಟಿಕೆಗಳು ಮತ್ತು ಇತರೆ ವಸ್ತುಗಳ ತಯಾರಿಕೆಯಲ್ಲಿ ಸಮರ್ಪಕವಾಗಿ ಬಳಸಬಹುದು. ಇಪ್ಪು ನೇರಳೆ ಎಲೆಗಳು ಉತ್ತಮವಾದ ಮೇವಾಗಿ ಉಪಯೋಗಿಸಬಹುದು. ಆದ್ದರಿಂದ ಇಪ್ಪು ನೇರಳೆ ಮರಗಳನ್ನು ರೇಷ್ಮೆ ಗೂಡು ಬೆಳೆಯದೇ ಇರುವ ರೈತರುಗಳು ಸಹ ಅವರ ಜಮೀನಿನ ಬದುಗಳಲ್ಲಿ ಜಾನುವಾರುಗಳ ಮೇವಿಗಾಗಿ ಬೆಳೆಯಲು ಸೂಕ್ತವಾಗಿದೆ. ■

# ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಲ್ಲಿ ಹಸಿರೆಲೆ ಗೊಬ್ಬರ

## ಇಲಿಗಳ ನಿಯಂತ್ರಣಕ್ಕಾಗಿ ಬೆಳೆಯಬಹುದಾದ ಬಹುಪಯೋಗಿ ಮರ-ಗ್ಲಿರಿಸಿಡಿಯಾ

**ಶ್ರೀ ಹೆಚ್.ಜಿ. ಶಿವಾನಂದಮೂರ್ತಿ** ಭಾ.ಅ.ಸೇ.(ನಿವೃತ್ತ), ಮೊ: 9448126246 E-mail: shivanandamurthyifs@gmail.com



ಗೊಬ್ಬರದ ಗಿಡವೆಂದೇ ಪ್ರಸಿದ್ಧಿಯಾಗಿರುವ ಗ್ಲಿರಿಸಿಡಿಯಾ ಮ್ಯಾಕುಲೇಡಾ (Gliricidia sepium) ವೇಗವಾಗಿ ಬೆಳೆಯುವ ದ್ವಿದಳ ಧಾನ್ಯ, ಮಧ್ಯಮ ಗಾತ್ರದ, ಮುಳ್ಳುಗಳಿಲ್ಲದ ಮರವಾಗಿದ್ದು, ಇದನ್ನು ಸಹ ಸುಬಾಬುಲ್‌ನಂತೆ ಹಸಿರು ಮೇವಾಗಿ, ಇಂಧನ/ಉರುವಲಿಗಾಗಿ, ಹಸಿರೆಲೆ ಗೊಬ್ಬರಕ್ಕಾಗಿ ಬೆಳೆಯಬಹುದಾದ ಮರವಾಗಿದೆ. ಕಾಫಿ, ಚಹಾ ಮತ್ತು ಕೋಕೋ ತೋಟಗಳಲ್ಲಿ ನೆರಳು ಮರದಂತೆ ಮತ್ತು ಜೀವಂತ ಬೇಲಿಗಾಗಿ ಬೆಳೆಸಲಾಗುತ್ತಿದೆ. ಫಿಲಿಫೈನ್ಸ್ ಮೂಲದ ಗೊವಾನ್ ಕೃಷಿ ವಿಜ್ಞಾನಿ ಜೂಲಿಯನ್ ಗೊನ್ಸಾಲ್ವೆಸ್‌ರವರು ಇತರೆ ರಸಗೊಬ್ಬರಗಳನ್ನು ಬಳಸದೆ ಭತ್ತದ ಬೆಳೆಯಲ್ಲಿ ಗ್ಲಿರಿಸಿಡಿಯಾ ಎಲೆ ಗೊಬ್ಬರದೊಂದಿಗೆ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವೆಂದು ಸಾಬೀತು ಪಡಿಸಿರುವರು. ಇದು ಉಷ್ಣವಲಯದ ತಗ್ಗು ಪ್ರದೇಶಗಳಲ್ಲಿ 22ರಿಂದ 30 ಡಿಗ್ರಿ ಸೆಲ್ಸಿಯಸ್ ವಾರ್ಷಿಕ ತಾಪಮಾನವನ್ನು ಹೊಂದಿರುವ ಪ್ರದೇಶಗಳಲ್ಲಿ ಬಹಳ ಸುಲಭವಾಗಿ, ಶೀಘ್ರಗತಿಯಲ್ಲಿ ಬೆಳೆಯುವ ಮರವಾಗಿದೆ. ಇದರ ಎಲೆಗಳು ಶೇಕಡ 20ರಿಂದ 30ರಷ್ಟು ಕಚ್ಚಾ ಪ್ರೋಟೀನ್ ಅಂಶವನ್ನು ಹೊಂದಿದೆ. ಬೆಳೆಗಳ ಬೆಳವಣಿಗೆಯನ್ನು ಹೆಚ್ಚಿಸಲು ಗ್ಲಿರಿಸಿಡಿಯಾ ಎಲೆ ಜೈವಿಕ ಕೃಷಿ ಪರಿಹಾರಗಳ ಒಂದು ಪ್ರಮುಖ ಅಂಶವಾಗಿದೆ. ಇತ್ತೀಚಿನ ಸಂಶೋಧನೆಯು ಕುರಿ ಮತ್ತು ದನಕರುಗಳಿಗೆ ಪೂರಕ ಮೇವಾಗಿ ಶುಷ್ಕ ವಾತಾವರಣದಲ್ಲಿ ಸ್ವಲ್ಪ ಹಸಿರು ಮೇವಿನೊಂದಿಗೆ ಶೇ.25 ರಷ್ಟು ಗ್ಲಿರಿಸಿಡಿಯಾ ಎಲೆಗಳನ್ನು ನೀಡಬಹುದು. ಗ್ಲಿರಿಸಿಡಿಯಾ ಎಂಬ ಹೆಸರನ್ನು ಕೀಟನಾಶಕ, ಶಿಲೀಂಧ್ರನಾಶಕ, ಕೊಲ್ಲುವುದು ಎಂಬ ಅರ್ಥ "ಗ್ಲೈರಸ್" ಮತ್ತು "ಸೆಡೋಸ್" ಎಂಬ ಎರಡು ಪದಗಳಿಂದ ಬಂದಿದೆ.

ಗ್ಲಿರಿಸಿಡಿಯಾ ಉಷ್ಣವಲಯದ ಉದ್ದಕ್ಕೂ ಕಾಫಿ ಮುಂತಾದ ತೋಟದ ಬೆಳೆಗಳ ಸುತ್ತಲೂ ಜೈವಿಕ ಬೇಲಿ, ಮೇವು, ಉರುವಲು, ಹಸಿರೆಲೆ ಗೊಬ್ಬರ, ಅಂತರ ಬೆಳೆ ಮತ್ತು ಇಲಿಗಳ ನಿವಾರಣೆಯ ಉದ್ದೇಶದಿಂದ ಬೆಳೆಯಲಾಗುತ್ತಿದೆ.

ಗ್ಲಿರಿಸಿಡಿಯಾವನ್ನು ದನಕರುಗಳು, ಕುರಿಗಳು ಮತ್ತು ಆಡುಗಳಿಗೆ ಮೇವಾಗಿ ಕತ್ತರಿಸಿ ನೀಡಲಾಗುತ್ತದೆ. ಇದರಲ್ಲಿನ ಹೆಚ್ಚಿನ ಪ್ರೋಟೀನ್ ಅಂಶವು ಉತ್ತಮವಾದ ಪಶುಗಳ ಆಹಾರವಾಗಿದೆ. ಇದನ್ನು ಪ್ರತಿ 2ರಿಂದ 4 ತಿಂಗಳಿಗೊಮ್ಮೆ ಕತ್ತರಿಸಬಹುದು. ಇದು ಪದೇ ಪದೇ ಕತ್ತರಿಸುವುದನ್ನು ಸಹಿಸಿಕೊಳ್ಳಬಲ್ಲದು. ವರ್ಷಗಳ ನಂತರ ಬೆಳೆದ ಮರಗಳನ್ನು ಕತ್ತರಿಸಿದಾಗ ಕೂಳೆ ಬೆಳೆ ಬರುತ್ತದೆ. ಇದು ಇತರೆ ಕೃಷಿ ಬೆಳೆಗಳೊಂದಿಗೆ ಸ್ಪರ್ಧಿಸುವುದಿಲ್ಲ. ಏಕೆಂದರೆ ಇದರ ತಾಯಿ ಬೇರು ಆಳಕ್ಕೆ ಹೋಗಿರುತ್ತದೆ ಹಾಗೂ ವಾತಾವರಣದಲ್ಲಿಯ ಸಾರಜನಕವನ್ನು ಬಳಸಿಕೊಂಡು ಬೆಳೆಯಬಲ್ಲದು. ಮಣ್ಣಿನ ಸವಕಳಿಯನ್ನು ಮತ್ತು ಕೊಚ್ಚುವಿಕೆಯನ್ನು ತಡೆಗಟ್ಟಲು ಇದೊಂದು ಉತ್ತಮವಾದ ಜೈವಿಕ ಸಾಧನವಾಗಿದೆ. ಕಾರಣ ಇದು ವೇಗವಾಗಿ ಬೆಳೆಯವುದು ಮತ್ತು ಸುಲಭವಾಗಿ ಪ್ರಸಾರವಾಗುವುದರಿಂದ ಆಕ್ರಮಣಕಾರಿ ಸಾಮರ್ಥ್ಯವನ್ನು ಹೊಂದಿದೆ.

1980ಕ್ಕೂ ಹಿಂದೆ ಅಂದರೆ ಬೋರ್‌ವೆಲ್‌ಗಳ ನೀರಾವರಿಗೂ ಮೊದಲು ತೆಂಗಿನ ಮರಗಳನ್ನು ಮಳೆಯಾಶ್ರಿತದಲ್ಲಿಯ ತಗ್ಗು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿತ್ತು. ವಿಶೇಷವಾಗಿ ತಿಪಟೂರು, ಅರಸೀಕೆರೆ, ತುರುವೆಕೆರೆ, ಚಿಕ್ಕನಾಯಕನಹಳ್ಳಿ ಕಡೂರು ಮತ್ತು ಚನ್ನರಾಯಪಟ್ಟಣ ತಾಲ್ಲೋಕುಗಳಲ್ಲಿ ಯತೇಚ್ಛವಾಗಿ ಬೆಳೆಯಲಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯ ತೀವ್ರ ಕೊರತೆಯಿಂದ ಬಹಳಷ್ಟು ಮಳೆಯಾಶ್ರಿತದಲ್ಲಿ ಬೆಳೆದಂತಹ ತೆಂಗಿನ ತೋಟಗಳು ಒಣಗಿ ಹೋಗಿವೆ. ಇದು ರೈತರನ್ನು ಸಂಕಷ್ಟಕ್ಕೆ ದೂಡಿದೆ. ಹಲವು ಭಾಗಗಳಲ್ಲಿ ಕೊರೆದಿರುವ ಬೋರ್‌ವೆಲ್‌ಗಳೂ ಸಹ ನೀರಿಲ್ಲದಂತಾಗಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ರೈತರು ತೆಂಗಿನ ತೋಟದಲ್ಲಿ ಗೊಬ್ಬರದ ಗಿಡಗಳನ್ನು ಒಂದು ಮರಕ್ಕೆ ಎರಡು ಗಿಡ ಹಾಕಬೇಕು. ಅದಕ್ಕೆ ಗೊಬ್ಬರ ಹಾಕಿ ಬೆಳೆಯುವ ಅವಶ್ಯಕತೆಯಿಲ್ಲ. ಮಳೆಗಾಲದಲ್ಲಿ ತೆಂಗಿನ ಬುಡಗಳ ಎರಡೂ ಕಡೆ ಬೀಜ ಅಥವಾ ಕಟಿಂಗ್‌ಗಳನ್ನು ಹಾಕುವುದರಿಂದ ಅವುಗಳು ಬೆಳೆಯಲು ಸಾಧ್ಯವಾಗುವುದು. ನಾಲ್ಕಾರು ತೆಂಗಿನ ಮರಗಳ ಬುಡಕ್ಕೆ ಕತ್ತರಿಸಿ ಹಾಕುವುದರಿಂದ ಒಂದು ರೀತಿಯ ತಿಪ್ಪೆಯಂತಾಗುವುದು ಹಾಗೂ ಹಸಿರೆಲೆ ಗೊಬ್ಬರವನ್ನು ತಯಾರಿಸಿದಂತಾಗುವುದು. ಇದರ ಸೊಪ್ಪು ಬೆಳೆಯುತ್ತಲೇ ಇರುತ್ತದೆ. ಅದೇ ಸೊಪ್ಪನ್ನು ಕತ್ತರಿಸಿ ತೆಂಗಿನ ಮರದ ಸುತ್ತ ಹಾಕಬೇಕಿದೆ. ಇದು ಕಳಿತು ಮಣ್ಣಿನಲ್ಲಿರುವ ಜೀವಿಗಳಿಗೆ ಆಹಾರವಾಗುವುದು. ಇದು ಮಣ್ಣಿನಲ್ಲಿಯ ಸಾವಯವ ಇಂಗಾಲದ ಅಂಶವನ್ನು ಹೆಚ್ಚಿಸುವುದು. ಇದರಿಂದ ಮಣ್ಣಿನಲ್ಲಿ ತೇವಾಂಶದ ಸಂರಕ್ಷಣೆಯಾಗುತ್ತದೆ. ತನ್ಮೂಲಕ ತೆಂಗಿನಕಾಯಿಗಳು ಅದ್ಭುತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಲು ಪ್ರಾರಂಭವಾಗುವುದು. ಇಷ್ಟೇ ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ತೆಂಗಿನ ತೋಟಗಳಲ್ಲಿ ಇಲಿಗಳ ಹಾವಳಿ ಹೆಚ್ಚಾಗಿದ್ದು, ಸಾಕಷ್ಟು ಪ್ರಮಾಣದಲ್ಲಿ ಎಳನೀರನ್ನು ತಿಂದು ಹಾಳು ಮಾಡುತ್ತಿವೆ. ಬಹುಶಃ ಗ್ಲಿರಿಸಿಡಿಯಾ ಬೆಳೆಯುವುದರಿಂದ ಇಲಿಗಳ ಹಾವಳಿಯನ್ನು ಸಹ ನಿಯಂತ್ರಿಸಲು ಸಾಧ್ಯವೆನಿಸುವುದು.

ಗ್ಲಿರಿಸಿಡಿಯಾ ಒಂದು ಬಹುಪಯೋಗಿ, ಪರಿಸರ ಸ್ನೇಹಿ ಮರವಾಗಿದ್ದು, ರೈತರ ಹೊಲಗಳಲ್ಲಿ ಇಲಿಗಳ ಹಾವಳಿ ತಪ್ಪಿಸಿ ಹೆಚ್ಚಿನ ಫಸಲನ್ನು ಪಡೆಯಲು ಸಾಧ್ಯವಾಗುವುದು.

ಮುಂದಿನ ಪುಟಕ್ಕೆ...

## ಸದಸ್ಯತ್ವ

**ಸಂಸ್ಥೆಯ ಸದಸ್ಯತ್ವ ಕೃಷಿ–ಅರಣ್ಯ–ತೋಟಗಾರಿಕೆಯಲ್ಲಿ ಆಸಕ್ತಿ ಹೊಂದಿದವರಿಗೆ ತೆರೆದಿರುತ್ತದೆ.**

| ಸದಸ್ಯತ್ವದ ವಿವರ | ಶುಲ್ಕ |
|---|---|
| ಸಂಸ್ಥೆ ಸದಸ್ಯತ್ವ/Institutional | 25,000.00 |
| ಪೋಷಕ ಸದಸ್ಯತ್ವ/Patron | 20,000.00 |
| ಅಜೀವ ಸದಸ್ಯತ್ವ/Life Member | 5,000.00 |
| ಸಹ ಸದಸ್ಯತ್ವ/Associate Member | 2,000.00 |
| ಸಾಮಾನ್ಯ ಸದಸ್ಯತ್ವ (ಕೃಷಿಕರಿಗೆ)/ (Farmerse Only) | 100.00 |

ಹಿಂದಿನ ಪುಟದಿಂದ...

ಇದನ್ನು ಹೆಚ್ಚಿಗೆ ಏನೂ ಖರ್ಚಿಲ್ಲದೆ, ಎಲ್ಲರೂ ಸುಲಭವಾಗಿ ಬೆಳೆಯಬಹುದಾದ ಪರಿಸರ ಸ್ನೇಹಿ ಕಾರ್ಯಕ್ರಮ.

ಭಾರತದಲ್ಲಿ ಜಾನುವಾರುಗಳ ಸಂಖ್ಯೆ ಬಹಳ ಪ್ರಮಾಣದಲ್ಲಿ ಕಡಿಮೆಯಾಗಿದೆ. ಆದರೆ ಹಾಲಿಗಾಗಿ ಹೆಚ್ಚು ಹಾಲು ಕೊಡುವ ತಳಿಗಳನ್ನು ಸಾಕಲಾಗುವುದರಿಂದ "ಕ್ಷೀರ ಕ್ರಾಂತಿ"ಯನ್ನು ಅಂದರೆ ವೈಟ್ ರೆವಲ್ಯೂಷನ್ ಮಾಡಲಾಗಿದೆ. ಆದರೆ ಇದೇ ಪ್ರಮಾಣದಲ್ಲಿ "ಸಾವಯವ ಕ್ರಾಂತಿ" ಮಾಡಲಾಗಲಿಲ್ಲ. ಕಾರಣ ಸ್ಥಳೀಯ ಜಾನುವಾರುಗಳ (ಹಸು ಮತ್ತು ಎಮ್ಮೆ) ಸಂಖ್ಯೆ ತುಂಬಾ ಕಡಿಮೆಯಾಗಿದೆ. ಇದರಿಂದ ಮೊದಲೆಲ್ಲಾ ಹೆಚ್ಚಾಗಿ ದನಗಳನ್ನು ಕೊಟ್ಟಿಗೆ ಗೊಬ್ಬರಕ್ಕಾಗಿ ಸಾಕಲಾಗುತ್ತಿತ್ತು. ಆದರೆ ಈಗ ಆರ್ಥಿಕ ಲಾಭದ ದೃಷ್ಟಿಯಿಂದ ಮುಂದುವರೆದ ತಳಿಗಳಾದ ಹೆಚ್.ಎಫ್ ಹಾಗೂ ಜೆರ್ಸಿ ಹಸುಗಳ ತಳಿಗಳನ್ನು ಹಾಲನ್ನು ಹೆಚ್ಚಾಗಿ ನೀಡುವುದರಿಂದ ಸಾಕಲಾಗುತ್ತಿದೆ. ಜೊತೆಗೆ ಮೊದಲೆಲ್ಲಾ ಉಳುಮೆ ಮಾಡಲು ಎತ್ತುಗಳನ್ನು ಬಳಸಲಾಗುತ್ತಿತ್ತು. ಆದರೆ ಇತ್ತೀಚಿನ ತಾಂತ್ರಿಕ ಯುಗದಲ್ಲಿ ಟ್ರ್ಯಾಕ್ಟರ್, ಟಿಲ್ಲರ್ ಹಾಗೂ ಇತರೆ ಯಂತ್ರಗಳನ್ನು ಕೃಷಿ ಹಾಗೂ ತೋಟಗಾರಿಕೆಯಲ್ಲಿ ಬಳಸುತ್ತಿರುವುದರಿಂದ, ಎತ್ತುಗಳ ಸಂಖ್ಯೆಯು ಗ್ರಾಮೀಣ ಭಾಗದಲ್ಲಿ ತುಂಬಾ ಕಡಿಮೆಯಾಗಿದೆ. ಇನ್ನೂ ಸ್ವಲ್ಪ ವರ್ಷಗಳು ಕಳೆದ ನಂತರ ಈಗ ಪ್ರತಿ ಹಳ್ಳಿಗಳಲ್ಲಿ ಒಂದೋ ಅಥವಾ ಎರಡೋ ಜೊತೆ ಎತ್ತುಗಳು ಕಂಡುಬರುತ್ತಿವೆ. ಇನ್ನು ಮುಂದೆ ಎತ್ತಿನಗಾಡಿಯನ್ನು ಹಾಗೂ ಎತ್ತಿನ ಬೇಸಾಯವನ್ನು ಕೃಷಿ ವಸ್ತು ಪ್ರದರ್ಶನಗಳಲ್ಲೋ ಅಥವಾ ಯಾವುದಾದರೂ ವಸ್ತು ಸಂಗ್ರಹಾಲಯಗಳಲ್ಲೋ ನೋಡಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಈ ಮೇಲಿನ ಎಲ್ಲಾ ಕಾರಣಗಳಿಂದ ಜಾನುವಾರುಗಳ ಸಂಖ್ಯೆ ತುಂಬಾ ಕಡಿಮೆಯಿದ್ದು, ಜೊತೆಗೆ ಮೊದಲು ಅಲ್ಲಲ್ಲೇ ಕೆಲವು ಕಡೆ ಗೋಮಾಳ ಜಾಗಗಳು, ಕಂದಾಯ ಭೂಮಿಗಳು ಇರುತ್ತಿದ್ದವು ಹಾಗೂ ಹಳ್ಳ ಕೊಳ್ಳಗಳ ಪಕ್ಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗಿಡಮರಗಳು ಬೆಳೆಯುತ್ತಿದ್ದವು. ಹಳ್ಳಿಯ ಜನರು ಈ ಗಿಡ ಮರಗಳ ಎಲೆಗಳಿಂದ ಹಸಿರೆಲೆ ಗೊಬ್ಬರವನ್ನು ಪಡೆಯುತ್ತಿದ್ದರು. ಈಗ ಇವುಗಳೆಲ್ಲಾ ಮಾಯವಾಗಿದ್ದು, ಎಲ್ಲರೂ ಬೋಧಿಸುತ್ತಿರುವ "ಸಾವಯವ ಕೃಷಿ" ಸಾಧ್ಯವೇ ಎನ್ನುವ ವಿಚಾರದ ಬಗ್ಗೆ ಪ್ರತಿಯೊಬ್ಬರೂ ಚಿಂತಿಸಬೇಕಿದೆ. ಈ ವಿಚಾರವಾಗಿ ಹೇಳುವುದು ಸುಲಭ ಆದರೆ ಆಚರಣೆಗೆ ತರುವುದರ ಬಗ್ಗೆ ಚಿಂತನೆ ನಡೆಯಬೇಕಿದೆ. ಪ್ರಜ್ಞಾವಂತ ಕೃಷಿ ವಿಜ್ಞಾನಿಗಳು, ಚಿಂತಕರು ಹಾಗೂ ಸರ್ಕಾರಗಳು ಈ ದಿಸೆಯಲ್ಲಿ ಚಿಂತನೆ ನಡೆಸಿ ಹೆಮ್ಮೆಯ ಕಾರ್ಯಕ್ರಮವಾದ "ಸಾವಯವ ಕೃಷಿಯ" ಅನುಷ್ಠಾನಕ್ಕೆ ತರುವುದು ಅತ್ಯಾವಶ್ಯಕವಾಗಿದೆ.

■

## ವರದಿ

### ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಅಕ್ಟೋಬರ್–ಡಿಸೆಂಬರ್ 2020ರ ಕಾರ್ಯಕ್ರಮಗಳು

ಕಾರ್ಯದರ್ಶಿ, ಮೊ: 9448019306

1. ದಿ. 22–10–2020ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.
2. ದಿ.22–10–2020ರಂದು ಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು World Resources Institute India ಸಂಸ್ಥೆಯ ಅಧ್ಯಕ್ಷರಾದ ಡಾ. ರುಚಿಕಾಸಿಂಗ್ ಇವರೊಡನೆ ವೀಡಿಯೋ ಕಾನ್ಫರೆನ್ಸ್ (video conference) ಮೂಲಕ ಕರ್ನಾಟಕದಲ್ಲಿ ಕೃಷಿ ಅರಣ್ಯದ ಬಗ್ಗೆ ಮಾಹಿತಿ ಹಂಚಿಕೊಳ್ಳಲಾಯಿತು.
3. ದಿ.09–11–2020ರಂದು ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಾಧಿಕಾರಿ ಮಲ್ಲೇಶ್ವರಂ, ಬೆಂಗಳೂರು ಇವರಿಂದ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆಯ ಕಲಂ 13ರ ಪ್ರಕಾರ ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಗೆ ಸ್ವೀಕೃತಿ ಪಡೆಯಲಾಯಿತು.
4. ದಿ. 14–11–2020ರಂದು ಮಂಡ್ಯ ತಾಲ್ಲೂಕು, ಕೆರಗೋಡು ಗ್ರಾಮದ ಶ್ರೀ ರಾಮಕೃಷ್ಣ ಅವರ ಜಮೀನಿನಲ್ಲಿ ಹಿಪ್ಪು ನೇರಳೆ ತೋಟ ಹಾಗೂ ಸಾಗುವಾನಿ ಗಿಡಗಳ ಪ್ರಾತ್ಯಕ್ಷಿತೆ ಪ್ಲಾಟ್‌ಗೆ ಕಾರ್ಯದರ್ಶಿಗಳು ಭೇಟಿ ನೀಡಿ ಸಾಗುವಾಗಿ ಗಿಡಗಳನ್ನು ಪರಿಶೀಲಿಸಿ ಅವುಗಳಿಗೆ ತಗುಲಿರುವ ಬ್ಲೈಟ್ (Blight) ರೋಗ ತಡೆಯುವ ಕುರಿತು ಸೂಚಿಸಲಾಯಿತು.
5. ದಿ. 18–12–2020ರಂದು ಸಂಸ್ಥೆಯ ಕಛೇರಿಯಲ್ಲಿ ಕೃಷಿವನ ಸಂಪಾದಕ ಮಂಡಳಿಯು ಸಭೆ ಸೇರಿ, ಕೃಷಿವನದ ಲೇಖನಗಳು ಹಾಗೂ ಛಾಯಾಚಿತ್ರಗಳನ್ನು ಅಂತಿಮಗೊಳಿಸಲಾಯಿತು.







# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ) ಆಡಳಿತ ಮಂಡಳಿ

| | | | |
|---|---|---|---|
| **ಶ್ರೀ ದೀಪಕ್ ಶರ್ಮ**<br>ಅಧ್ಯಕ್ಷರು<br>ಮೊ.9986232094 | **ಶ್ರೀ ಎನ್. ಸಂಪಂಗಿ**<br>ಸಹ ಅಧ್ಯಕ್ಷರು<br>ಮೊ.9980294242 | **ಶ್ರೀ ಆರ್.ಎಮ್. ಪಾಲಣ್ಣ**<br>ಉಪಾಧ್ಯಕ್ಷರು<br>ಮೊ.9945015617 | **ಶ್ರೀ ಎ.ಎಂ. ಅಣ್ಣಯ್ಯ**<br>ಕಾರ್ಯದರ್ಶಿ<br>ಮೊ.9448019306 |
| **ಡಾ. ಎಂ. ಮಹದೇವ ಮೂರ್ತಿ**<br>ಜಂಟಿ ಕಾರ್ಯದರ್ಶಿ<br>ಮೊ.9845588203 | **ಶ್ರೀ ಕೆ.ಎಸ್. ಆನಂದ್**<br>ಖಜಾಂಚಿ<br>ಮೊ.9448943995 | **ಡಾ. ಎಂ. ಮಹಾದೇವಪ್ಪ**<br>ಸದಸ್ಯರು<br>ಮೊ.9448360991 | **ಶ್ರೀ ಎನ್.ಡಿ. ತಿವಾರಿ**<br>ಸದಸ್ಯರು<br>ಮೊ.9448360161 |
| **ಶ್ರೀ ಬಿ. ಶಿವನಗೌಡ**<br>ಸದಸ್ಯರು<br>ಮೊ.9448124087 | **ಶ್ರೀ ಸಿದ್ದೇಗೌಡ**<br>ಸದಸ್ಯರು<br>ಮೊ.9449244323 | **ಶ್ರೀ ಎಸ್. ನಾರಾಯಣಸ್ವಾಮಿ**<br>ಸದಸ್ಯರು<br>ಮೊ.9880042155 | **ಶ್ರೀ ಬಿ.ಎಸ್. ರಘುನಾಥ**<br>ಸದಸ್ಯರು<br>ಮೊ.9945003993 |
| **ಶ್ರೀ ಎಂ. ಗುರುಮೂರ್ತಿ**<br>ಸದಸ್ಯರು<br>ಮೊ.9945754650 | **ಡಾ|| ಎನ್. ಸ್ವಾಮಿರಾವ್**<br>ಸಹ ಸದಸ್ಯರು<br>ಮೊ.9880101200 | **ಶ್ರೀಮತಿ ಶೋಭ ಎಚ್.ಜಿ.**<br>ಸಹ ಸದಸ್ಯರು<br>ಮೊ.9448945367 | |

ಜಾಹೀರಾತು



**ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)**
ವನವಿಕಾಸ, ನೆಲಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು – 560003, ದೂ. 080–23566126

**ಸದಸ್ಯತ್ವ ಅರ್ಜಿ**

INSTITUTION OF AGROFORESTRY FARMERS AND TECHNOLOGISTS (R)
VANAVIKASA, GROUND FLOOR, 18TH CROSS, MALLESHWARAM,
BENGALURU – 560003, Tel: 080-23566126

## APPLICATION FOR MEMBERSHIP

ಗೆ,
ಕಾರ್ಯದರ್ಶಿಗಳು

ಮಾನ್ಯರೇ,
ನಾನು ಈ ಸಂಸ್ಥೆಯ ಸದಸ್ಯನಾಗಲು ಇಚ್ಛಿಸುತ್ತೇನೆ. ಈ ಬಗ್ಗೆ ಕೆಳಗೆ ಗುರುತು ಹಾಕಿದ ಸದಸ್ಯತ್ವದ ಶುಲ್ಕ ರೂ...............ಗಳನ್ನು ..................... ಬ್ಯಾಂಕಿನ ಡಿ.ಡಿ/ಚೆಕ್ ನಂ.:..................... ದಿನಾಂಕ.:....................... ಅನ್ನು ಈ ಮೂಲಕ ಲಗತ್ತಿಸಿದ್ದೇನೆ/ ಆನ್‌ಲೈನ್ (NEFT) ಮೂಲಕ ಶುಲ್ಕ ಪಾವತಿಸಿದೆ. ಅರ್ಜಿಯನ್ನು ಸ್ವೀಕರಿಸಬೇಕಾಗಿ ವಿನಂತಿ.

| | ಸದಸ್ಯತ್ವ ಮಾಹಿತಿ | ಪ್ರವೇಶ ಶುಲ್ಕ ರೂ | ಗುರುತು (✓) |
|---|---|---|---|
| 1 | ಸಂಸ್ಥೆ | 25,000.00 | |
| 2 | ಪೋಷಕ | 20,000.00 | |
| 3 | ಅಜೀವ ಸದಸ್ಯ | 5,000.00 | |
| 4 | ಸಹ ಸದಸ್ಯ | 2,000.00 | |
| 5 | ಸಾಮಾನ್ಯ ಸದಸ್ಯ (ಕೃಷಿಕರಿಗೆ ಮಾತ್ರ ) | 100.00 | |
| | **ಸದಸ್ಯರ ವಿವರ** | | |
| 1 | ಹೆಸರು | | |
| 2 | ಉದ್ಯೋಗ | | |
| 3 | ಸಂಸ್ಥೆ | | |
| 4 | ವಿಳಾಸ | | |
| 5 | ಮೊಬೈಲ್ ಸಂಖ್ಯೆ | | |
| 6 | ಊರು | | |
| 7 | ಹೋಬಳಿ | | |
| 8 | ತಾಲೂಕು | | |
| 9 | ಜಿಲ್ಲೆ | | |
| 10 | ಪಿನ್ ಕೋಡ್ | | |
| 11 | ಇ–ಮೇಲ್ | | |

ನಾನು ಈ ಸಂಸ್ಥೆಯ ನಿಯಮಗಳನುಸಾರ ನಡೆದುಕೊಳ್ಳುತ್ತೇನೆಂದು ಈ ಮೂಲಕ ಪ್ರಮಾಣಿಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ

ದಿನಾಂಕ :

ಸ್ಥಳ :

ರುಜು

| **ಕಛೇರಿ ಉಪಯೋಗಕ್ಕಾಗಿ** | | | |
|---|---|---|---|
| ಅರ್ಜಿ ಸ್ವೀಕರಿಸಿದ ದಿನಾಂಕ | | ಮೊಬಲಗು | |
| ರಶೀತಿ ಸಂಖ್ಯೆ | | ದಾಖಲಾದ ದಿನಾಂಕ | |
| ಅನುಮೋದಿಸಿದೆ | | | |
| ಕಾರ್ಯದರ್ಶಿ | ಉಪಾಧ್ಯಕ್ಷರು | | ಅಧ್ಯಕ್ಷರು |

ಜಾಹೀರಾತು

ಅರಣ್ಯ ಇಲಾಖೆ

# ಅರಣ್ಯ ಸಂಪತ್ತು ಜೀವಜಾಲದ ಅದ್ಭುತ ಜಗತ್ತು



**ಶ್ರೀ ಬಿ.ಎಸ್. ಯಡಿಯೂರಪ್ಪ**
ಸನ್ಮಾನ್ಯ ಮುಖ್ಯಮಂತ್ರಿಗಳು



ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರಾದ **ಶ್ರೀ ಆನಂದ್ ಸಿಂಗ್** ಅವರು ಆನೆ ತರಬೇತಿ ಶಿಬಿರಕ್ಕೆ ಭೇಟಿ ನೀಡಿದ ಸಂದರ್ಭ

ಕಾಡುಗಳು ಜೀವಿ ವೈವಿಧ್ಯತೆಯ ಬಹುದೊಡ್ಡ ಆಡಂಬೋಲ. ಜೀವವಿಕಾಸದ ಆಗರ ಮತ್ತು ತವರು ಕಾಡುಗಳೇ ಎಂಬುದು ಅವುಗಳ ಸುದೀರ್ಘ ಕಾಲದ ಅಸ್ತಿತ್ವ ಮತ್ತು ಪ್ರಾಮುಖ್ಯತೆಗೆ ಬಹುದೊಡ್ಡ ಸಾಕ್ಷಿ. ಮನುಷ್ಯ ಮೊದಲ್ಗೊಂಡು ಸೃಷ್ಟಿಯಲ್ಲಿ ಕಂಡುಬರುವ ಕೋಟ್ಯಾಂತರ ಜೀವಜಾಲಕ್ಕೆ ಆಸರೆಯಾದ ಕಾಡುಗಳು ನಾಗರಿಕತೆಯ ವಿಕಸನಕ್ಕೆ ಬಹುದೊಡ್ಡ ಕಾಣಿಕೆ ನೀಡಿವೆ. ಅರಣ್ಯ ಮತ್ತು ವನ್ಯಜೀವಿಗಳ ಮೇಲೆ ಮನುಷ್ಯನ ನಿರಂತರ ದಾಳಿಯಿಂದಾಗಿ ಎಷ್ಟೋ ಅಮೂಲ್ಯ ಸಂಪತ್ತುಗಳು ನಶಿಸಿಹೋಗಿವೆ. ಇನ್ನೂ ಕೆಲವು ವಿನಾಶದ ಅಂಚಿಗೆ ತಲುಪಿವೆ. ಇದನ್ನು ತಡೆಗಟ್ಟುವುದು, ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

**ಕಾಡುಗಳನ್ನು ಬೆಳೆಸೋಣ,**
**ವನ್ಯಜೀವಿಗಳನ್ನು ರಕ್ಷಿಸೋಣ.**

**ನಮ್ಮ ಬದುಕನ್ನು ಸಮೃದ್ಧಗೊಳಿಸಿ,**
**ಸಂತಸದ ಸಿರಿಯಲ್ಲಿ ಸಾಗೋಣ.**

ಅರಣ್ಯ ಸಹಾಯವಾಣಿ : 1926

Likes on

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ














ವಿಳಾಸ: ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ) ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು –560003 ದೂ: 080 23566126 Email: iaftbangalore@gmail.com, WWW.iaft.co.in